**PW**-1

(ಸಾಕ್ಷಿಯನ್ನು ಕರೆಸಿ ದಿನಾಂಕಃ 16-07-2025 ರಂದು ಪ್ರಮಾಣವಚನ ಬೋಧಿಸಲಾಯಿತು.)

**ಮಧ್ಯಂತರ ಆದೇಶದಂತೆ ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಎಸ್.ಬಿ. ರಿಂದಃ**

ಆರೋಪಿಯು ಮೊದಲು ಕೆ ಪಿ ಸಿ ಯಲ್ಲಿ ಸೆಕ್ಯೂರಿಟಿ ಗಾರ್ಡ ಆಗಿದ್ದರು. ಅದು ತಾತ್ಕಾಲಿಕ ಕೆಲಸವೋ ಶಾಶ್ವತ ಸರಕಾರಿ ಕೆಲಸವೋ ಗೊತ್ತಿಲ್ಲ. ಆರೋಪಿಗೆ ಊಟಕ್ಕೂ ಕಷ್ಟವಾಗಿದ್ದರಿಂದ ಕೆಲವು ದಿನಗಳ ಕಾಲ ಕೆ ಪಿ ಸಿ ಯಲ್ಲಿ ಸೆಕ್ಯೂರಿಟಿ ಆಗಿದ್ದರು ಎಂದರೆ ಅವರು ಮನೆ ಕಡೆ ಚೆನ್ನಾಗಿದ್ದಾರೆ ಎಂದು ನುಡಿಯುತ್ತಾರೆ. ಅವರಿಗೆ ಒಂದು ದೇವಸ್ಥಾನ ಸಹ ಇದೆ. ತಂದೆ ಮೃತಪಡುವ ಕಾಲಕ್ಕೆ ಆರೋಪಿಗೆ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಸರಿ. ನಾನು ಆರೋಪಿಗೆ ಹಣ ಕೊಡುವ ಕಾಲಕ್ಕೆ ಆತನಿಗೆ ಎಷ್ಟು ಉತ್ಪನ್ನ ಇದೆ ಎಂದು ವಿಚಾರಿಸಿರಲಿಲ್ಲ. ಕೇವಲ ಸ್ನೇಹಿತ ಆಗಿದ್ದಕ್ಕೆ ಕೊಟ್ಟಿದ್ದೆನೆ. ಆರೋಪಿಗೆ ಯಾವುದೇ ಉದ್ಯೋಗ ಇಲ್ಲವಾದ್ದರಿಂದ ಆತನಿಗೆ ನನ್ನಿಂದ 6,50000/- ರೂ. ತೆಗೆದುಕೊಳ್ಳುವ ಯಾವುದೇ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಆದಾಯ ಇರುವ ಬಗ್ಗೆ ನಾನು ಯಾವುದೇ ದಾಖಲೆ ನೀಡಿಲ್ಲ. ಆರೋಪಿಯು ಯಾವತ್ತೂ ನನ್ನಿಂದ 6,50000/- ರೂ. ತೆಗೆದುಕೊಂಡಿಲ್ಲ ಅಂದರೆ ಸರಿಯಲ್ಲ. ಅದೇ ಕಾರಣಕ್ಕೆ 6,50000/- ರೂ. ಗೆ ಆರೋಪಿ ಯಾವುದೆ ಚೆಕ್ ನೀಡಿಲ್ಲ ಎಂದರೆ ಸರಿಯಲ್ಲ.

ಆರೋಪಿಗೆ ಹಣ ಕೊಡುವ ಕಾಲಕ್ಕೆ ಬ್ಯಾಂಕಿನಲ್ಲಿ ನಾನು ಸಾಲ ಮಾಡಿದ್ದೆ. ನಾನೇ ಸ್ವತಹ ಸಾಲಗಾರನಾಗಿದ್ದರಿಂದ ಆರೋಪಿಗೆ 6,50,000/- ರೂ. ಕೊಡುವ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಹೂವು ಹಣ್ಣು ತರುಸುವ ಕಾರಣಕ್ಕೆ ಕೊಟ್ಟಿದ್ದ ಚೆಕನ್ನು ದುರುಪಯೋಗಪಡಿಸಿಕೊಂಡು ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಬಳಿ 4 ವರ್ಷಗಳ ಕಾಲ ಬಿ ಪಿ ಎಲ್ ಕಾರ್ಡ ಇದ್ದು, ನಂತರ ಅದನ್ನು ರದ್ದುಪಡಿಸಿದ್ದೇನೆ. ಬಿ ಪಿ ಎಲ್ ಕಾರ್ಡ ಪಡೆದುಕೊಂಡಿದ್ದಕ್ಕೆ ದಂಡವನ್ನು ಸಹ ಕೊಟ್ಟಿದ್ದೆನೆ. ವರ್ಷಕ್ಕೆ 12,000/- ಆದಾಯ ಇದ್ದವರಿಗೆ ಬಿ ಪಿ ಎಲ್ ಕಾರ್ಡ ಕೊಡುತ್ತಾರೆ ಎಂದರೆ ಸರಿ. ನನ್ನ ಯಾವುದೇ ದಾಖಲೆಗಳಲ್ಲಿ ಆರೋಪಿಗೆ ಹಣ ಕೊಟ್ಟ ಬಗ್ಗೆ ಯಾವುದೇ ದಾಖಲೆಯಲ್ಲಿ ತೋರಿಸಿಲ್ಲ. ನಾನು ಆದಾಯ ತೆರಿಗೆ ಪಾವತಿದಾರ. ಆರೋಪಿತನಿಗೆ ಹಣ ಕೊಟ್ಟಿದ್ದನ್ನು 2022-23 ನೇ ಸಾಲಿನ ತೆರಿಗೆ ರಿಟರ್ನ್ಸನಲ್ಲಿ ತೋರಿಸಿದ್ದೆನೋ ಇಲ್ಲವೊ ನೆನಪಿಲ್ಲ. 2022-2023 ನೇ ಸಾಲಿನ ತೆರಿಗೆ ರಿಟರ್ನ್ಸ ಹಾಜರುಪಡಿಸಲು ತೊಂದರೆ ಇಲ್ಲ. ನಾನು ಆರೋಪಿಗೆ ನೋಟೀಸ್ ಕೊಟ್ಟ ನಂತರ ಆರೋಪಿತನು ತನ್ನ ವಕೀಲರ ಮೂಲಕ ನಾನು ಅಷ್ಟು ಹಣ ತೆಗೆದುಕೊಂಡಿಲ್ಲ ಮತ್ತು ನನಗೆ ಅಷ್ಟು ಸಾಮರ್ಥ್ಯ ಇಲ್ಲ ಎಂದು ಮರು ಉತ್ತರ ನೀಡಿದ್ದಾರೆ ಎಂದರೆ ಸರಿಯಲ್ಲ. ಬಾಯಿ ಮಾತಿನಲ್ಲಿ ಹೇಳಿರುತ್ತಾನೆ. ವಾಸ್ತವ ಅಂಶಗಳ ಮರು ಉತ್ತರವನ್ನು ನೀಡಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನ ವಿರುದ್ಧ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**